ಓ.ಎಸ್. ನಂಬರ 38/2022

ಡಿ . ಡಬ್ಲ್ಯೂ-1

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 06-04-2024.

**ಮುಂದುವರೆದ ಪಾಟೀ ಸವಾಲು ಃ ವಾದಿ ಪರ ಶ್ರೀಮತಿ ಡಿ.ಎಸ್.ಎ. ವಕೀಲರಿಂದಃ**

ದಾವಾ ಅನುಸೂಚಿತ 'ಎ' ಆಸ್ತಿಯಲ್ಲಿ 1 ನೇ ಪ್ರತಿವಾದಿಯು ಮನೆ ಕಟ್ಟಲು ಶುರು ಮಾಡಿದ್ದರು ಎಂದರೆ ನಿಜ. ಅದಕ್ಕೆ ನಾನು ಪ್ರೋತ್ಸಾಹ ನೀಡಿರುತ್ತೇನೆ ಎಂದರೆ ನಿಜ. ಅದಕ್ಕೆ ವಾದಿಯರು ತಮ್ಮ ತಕರಾರುಗಳನ್ನು ವ್ಯಕ್ತಪಡಿಸಿದ್ದರು ಎಂದರೆ ನಿಜ. 1 ನೇ ವಾದಿಯು 2 ನೇ ವಾದಿಯ ಹೆಸರಿನಲ್ಲಿ ದಾನಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ದಾವಾಸ್ತಿಗಳನ್ನು ಸ್ವಯಾರ್ಜಿತವಾದ ಆಸ್ತಿಗಳು ಆಗಿರುತ್ತವೆ ಎಂದು ಸುಳ್ಳು ದಾನಪತ್ರಗಳನ್ನು ಮಾಡಿಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ದಾವಾ ಅನುಸೂಚಿತ 'ಬಿ' ಸ್ವತ್ತಿನಲ್ಲಿ 2 ನೇ ವಾದಿಯು ಅನುಭವಿಸುತ್ತಾ ಬರುತ್ತಿದ್ದಾರೆ ಎಂದರೆ ಸಾಕ್ಷಿಯು ನಾವು ನಾಲ್ಕೂ ಜನ ಸ್ವಾಧೀನಾನುಭವದಲ್ಲಿ ಇರುತ್ತೇವೆ ಎಂದು ನುಡಿದಿರುತ್ತಾರೆ. ನಾನು ಸದ್ರಿ ಆಸ್ತಿಯಲ್ಲಿ ಸಾಗುವಳಿ ಮಾಡುತ್ತಿದ್ದೇನೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರಪಡಿಸಿರುವುದಿಲ್ಲ.1 ನೇ ವಾದಿಯು ವಾರಸಾ ನಾತೆಯಿಂದ ದಾವಾಸ್ತಿಗಳನ್ನು ಸ್ವಾಧೀನಪಡೆಯದೇ ದಾನಪತ್ರದ ಮುಖಾಂತರ ಸ್ವಾಧೀನ ಪಡೆದು ತಮ್ಮ ಹೆಸರುಗಳನ್ನು ವರ್ಗಾಯಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅದರಲ್ಲಿ ನಮ್ಮ ನಾಲ್ಕೂ ಜನರ ಹೆಸರುಗಳು ವರ್ಗಾವಣೆಯಾಗಬೇಕು ಎಂದು ನುಡಿದಿರುತ್ತಾರೆ. ಸಾವಿತ್ರಮ್ಮ ರವರು ತಮ್ಮ ಜೀವಿತಾವಧಿಯಲ್ಲಿ ಯಾವುದೇ ಕಾಗದಪತ್ರಗಳನ್ನು ಮಾಡಿಕೊಟ್ಟಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು ದಾವಾಸ್ತಿಗಳಿಗೆ ಜಂಟಿ ಹಕ್ಕುದಾರರೆಂದು ಹಕ್ಕು ಸಾಧಿಸುವುದು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ಜಂಟಿ ಹಕ್ಕುದಾರರೆಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರಪಡಿಸಿರುವುದಿಲ್ಲ. ದಾವಾಸ್ತಿಗಳು ಯಾವುದೇ ಕಾಲಕ್ಕೂ ವಾಂಟಣಿ ಆಗಿರುವುದಿಲ್ಲ ಮತ್ತು ನೀವು ಮದುವೆ ಆದ ನಂತರ ಬೇರೆ ಬೇರೆ ವಾಸ ಮಾಡುತ್ತಾ ಬಂದಿರುತ್ತಿರಿ ಎಂದರೆ ನಿಜ. 1997 ನೇ ಇಸ್ವಿಯಿಂದ ದಾವಾಸ್ತಿಗಳ ಸ್ವಾಧೀನಾನುಭವವು 1 ನೇ ವಾದಿಯರ ಹೆಸರಿನಲ್ಲೇ ಇದೆ ಎಂದರೆ ನಿಜ. ಆಸ್ತಿ ನಂ. 146 ಬಿ ಇದು ಪ್ರೇಮಾ ಸುಂದರಯ್ಯ ಎಂಬುವರ ಹೆಸರಿನಲ್ಲಿದೆ. ಸದ್ರಿಯದ್ದು ತಗಡಿನ ಮನೆ ಇದ್ದು, ಕಳೆದ ವರ್ಷದಲ್ಲಿ ನಾನು ಕಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಸದ್ರಿ ಆಸ್ತಿಯು ದಾವಾ ಅ ಶೆಡ್ಯೂಲ್ ಆಸ್ತಿಗಳಲ್ಲಿ ಬರುವುದಿಲ್ಲ ಎಂದರೆ ಸಾಕ್ಷಿಯು ಗ್ರಾಮಠಾಣಾ ವತಿಯಲ್ಲಿ ಬರುತ್ತದೆ ಎಂದು ನುಡಿದಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೇಳಿದ್ದರಿಂದ ಕಲ್ಪಿಸಲಾಯಿತು.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ.

Sd/-

**ಸಿವಿಲ್ ಜಡ್ಜ, ಮುಂಡಗೋಡ.**